ಪರಿಶಿಷ್ಟ ಜಾತಿ/ವರ್ಗದವರಿಗೆ ಮೀಸಲಾತಿ.

4199(4517) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಜಿಲ್ಲಾ ಮಟ್ಟದ ರಾಜ್ಯಮಟ್ಟದ ಸಹಕಾರ ಸಂಘಗಳಲ್ಲಿ ಮತ್ತು ರಾಜ್ಯ (ಸಹಕಾರ) ಮಹಾ ಮಂಡಳಿಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಮೇಲ್ಕಂಡ ಸಹಕಾರ ಸಂಘಗಳಲ್ಲಿ ಮೀಸಲಾತಿ ಕಲ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :—

ಅ) ವ್ಯಕ್ತಿಗಳು ಮಾತ್ರ ಸದಸ್ಯರಾಗಿರುವ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಆ) ಸಂಪೂರ್ಣವಾಗಿ ವ್ಯಕ್ತಿ ಸದಸ್ಯತ್ವ ಹೊಂದಿರುವ ಸಹಕಾರಿ ಸಂಘಗಳಲ್ಲಿ ಮೀಸಲಾತಿ ಕಲ್ಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೆಗಾ ಡೇರಿ ಯೋಜನೆ ಬಗ್ಗೆ.

4200 (4536) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಹಾಲು ಮಹಾಮಂಡಳಿಯು ಮೆಗಾ ಡೇರಿ ಯೋಜನೆಯನ್ನು ಪ್ರಾರಂಭಿಸಿರುವುದು ನಿಜವೇ, ಈಗಿರುವ ಡೇರಿಯು ಸಾಮರ್ಥ್ಯದ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸದಿದ್ದರೂ ಮೆಗಾ ಡೇರಿ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ಕಾರಣಗಳನ್ನು ಒದಗಿಸಿ.

ಆ) ಮೆಗಾ ಡೇರಿ ಯೋಜನೆಯ ಅಂದಾಜು ವೆಚ್ಚವನ್ನು ಪರಿಷ್ಕರಿಸಿದ್ದು ನಿಜವೇ? ಮೂಲ ಅಂದಾಜು ವೆಚ್ಚ ಮತ್ತು ಪರಿಷ್ಕರಿಸಿದ ಅಂದಾಜು ವೆಚ್ಚಗಳ ವಿವರಗಳನ್ನು ಒದಗಿಸಿ.

ಇ) ಕರ್ನಾಟಕ ಹಾಲು ಮಹಾಮಂಡಳವು ಮೆಗಾ ಡೇರಿಯ ಅಂದಾಜು ವೆಚ್ಚಕ್ಕೆ ಮತ್ತು ಮೂಲ ಅಂದಾಜು ವೆಚ್ಚದ ಪರಿಷ್ಕರಣೆ ಸರ್ಕಾರದ ಅನುಮೋದನೆಯನ್ನು ಪಡೆದಿದೆಯೇ ಅಂತಹ ಸರ್ಕಾರದ ಆದೇಶ ಪತ್ರಗಳ ಪ್ರತಿಗಳನ್ನು ಒದಗಿಸಿ ಸರ್ಕಾರದ ಅನುಮೋದನೆಯನ್ನು ಒದಗಿಸಿ ಸರ್ಕಾರದ ಅನುಮೋದನೆಯನ್ನು ಪಡೆಯದಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುವುದು.

ಶ್ರೀ ಡಿ.ಕೆ. ಶಿವಕುಮಾರ (ಸಹಕಾರ ಸಚಿವರು) :—

ಅ) ಕರ್ನಾಟಕ ಹಾಲು ಮಹಾಮಂಡಳಿಯು ಮೆಗಾ ಡೇರಿಯನ್ನು ಪ್ರಾರಂಭಿಸಿರುರುದಿಲ್ಲ. ಮೆಗಾ ಡೇರಿಯು ಬೆಂಗಳೂರು ಹಾಲು ಒಕ್ಕೂಟದ ಬೆಂಗಳೂರು ಡೇರಿಯಲ್ಲಿ ನಿರ್ಮಾಸಲಾಗುತ್ತಿದೆ.

ಆ) ಮೆಗಾ ಡೇರಿ ಯೋಜನೆಯ ಅಂದಾಜು ವೆಚ್ಚವನ್ನು ಪರಿಷ್ಕರಣೆ ಮಾಡಲಾಗಿರುವುದಿಲ್ಲ.

ಇ) ಇಲ್ಲ.

ಅಂಗನವಾಡಿ ಕಟ್ಟಡಗಳ ನಿರ್ಮಾಣ.

4201(4522) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಸ್ವಂತ ಕಟ್ಟಡ ಇರದೇ ಇರುವ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಯೋಚಿಸಿದೆಯೇ?

ಇ) ಹಾಗಿದ್ದಲ್ಲಿ ಎಂದು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :—

ಅ) 18883 (ವಿಧಾನಸಭಾ ಕ್ಷೇತ್ರವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.)

ಆ) ಹೌದು

ಇ) ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸುವುದು ಜಿಲ್ಲಾ ವಲಯದ ಕಾರ್ಯಕ್ರಮವಾಗಿರುತ್ತದೆ. ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಅನುದಾನ, ಜೆಆರ್‌ವೈ, ಇಎಎಸ್, ಸಂಸತ್ ಸದಸ್ಯರ ನಿಧಿ ಹೀಗೆ ಲಭ್ಯವಿರುವ ಮೂಲಗಳಿಂದ ಜಿಲ್ಲಾ ಪಂಚಾಯತ್‌ಗಳ ಮೂಲಕ ನಿರ್ಮಿಸಲಾಗುತ್ತಿದೆ. 2000-2001 ನೇ ಸಾಲಿನಲ್ಲಿ ಇಲಾಖಾ ಮತಿಯಿಂದ ರೂ. 290-50 ಲಕ್ಷ ವೆಚ್ಚದಲ್ಲಿ ಪ್ರತಿ ಕಟ್ಟಡಕ್ಕೆ ರೂ. 50,000.00ರಂತೆ 581 ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮ ಕೈಕೊಳ್ಳಲಾಗಿದೆ.